## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ. 1118/2019

**ಪಿಡಬ್ಲೂ-1**

**ಸಿಡಬ್ಲೂ-3**

ಸಾಕ್ಷಿದಾರರ ಹೆಸರು - ಸೋಮಶೆಟ್ಟಿ
ತಂದೆಯ ಹೆಸರು - ಲೇಟ್ ಬೋರಶೆಟ್ಟಿ
ವಯಸ್ಸು - 55 ವರ್ಷ
ಕೆಲಸ - ಅಬಕಾರಿ ಉಪನೀರಿಕ್ಷಕರು
ವಾಸ - ಮೈಸೂರು

**ದಿನಾಂಕ 15.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

ಡಿಸೆಂಬರ್ 2015 ರಿಂದ ಆಕ್ಟೋಬರ್ 2018 ರವೆರೆಗ ಕೆ ಆರ್ ನಗರ ವಲಯದಲ್ಲಿ ಅಬಕಾರಿ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 21.07.2018 ರಂದು ಚಾಸಾ 6 ರವರಿಗೆ ಬಂದ ಖಚಿತ ಮಾಹಿತಿ ಏನೆಂದರೆ ಕೆ ಆರ್ ನಗರ ಪಟ್ಟಣದ ಪುರಸಭೆ ತರಕಾರಿ ಮಾರುಕಟ್ಟೆ ಹತ್ತಿರ ಚಂದ್ರು ಎಂಬ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿದ್ದು ಚಾಸಾ 6 ರವರು ಆ ವಿಚಾರವನ್ನು ನನಗೆ ಚಾಸಾ 4 ರವರಿಗೆ ವಿಷಯ ತಿಳಿಸಿ ಕಚೇರಿಯಿಂದ ನಮ್ಮನ್ನು ಅವರ ಜೊತೆ ಕರೆದುಕೊಂಡು ಕೆ ಆರ್ ನಗರದ ಗರುಡಗಂಭ ಸರ್ಕಲ್ ಹತ್ತಿರ ಬಂದು ಅಲ್ಲಿಯೇ ಇದ್ದ ಸಾರ್ವಜನಿಕನ್ನು ಬರಮಾಡಿಕೊಂಡ ಅವರಿಗೆ ನಾವು ಬಂದ ವಿಚಾರವನ್ನು ತಿಳಿಸಿ ದಾಳಿ ಸಂದರ್ಭದಲ್ಲಿ ಪಂಚರಾಗಿ ಕೋರಿಕೊಂಡ ಮೇರೆಗೆ ಚಾಸಾ 1 ಮತ್ತು 2 ರವರು ಒಪ್ಪಿದ ಮೇರೆಗೆ ವರಿಗೆ ನೋಟೀಸ್ ನೀಡಿ ನಮ್ಮ ವಾಹನದಲ್ಲಿ ಕೂರಿಸಿಕೊಂಡು ತರಕಾರರಿ ಮಾರುಕಟ್ಟೆ ಬಳಿ ತೆರಳುತ್ತಿದ್ದಾಗ ಬಾವಸಾರ ಆಟೋ ಪಾರ್ಟ್ಸ ಮತ್ತು ಸಿದ್ದೇಶ್ವರ ಸ್ಟೋರ್ ನ ಮಧ್ಯಭಾಗದ ಗಲ್ಲಿಯಲ್ಲಿ ಒಬ್ಬ ಆಸಾಮಿಯು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದು

ನಿಂತಿದ್ದರು ಆತ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಗಾಬರಿಗೊಂಡನು. ಆಗ ನಾವು ವಾಹನದಿಂದ ಕೆಳಗೆ ಇಳಿದು ಆತನನ್ನು ಹಿಡಿದೆವು. ಆಗ ಆಸಾಮಿಯು ತನ್ನ ಕೈಯಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಬೀಸಾಡಿ ನಮ್ಮನ್ನು ತಳ್ಳಿ ಓಡಿಹೋದ. ಆತನನ್ನು ಹಿಡಿಯಲು ಹಿಂಬಾಲಿಸಿದಾಗ ಆತ ತಪ್ಪಿಸಿಕೊಂಡ. ನಂತರ ವಾಪಸ್ಸು ಬಂದು ಆತ ಬೀಸಾಡಿದ ಚೀಲ ತೆಗೆದು ನೋಡಿದಾಗ ಅದರಲ್ಲಿ 90 ಮಿಲಿಯ ಒರಿಜಿನಲಿ ಚಾಯ್ಸ್ ವಿಸ್ಕಿಯ 35 ಟೆಟ್ರಾ ಪ್ಯಾಕೆಟ್‌ಗಳು ಹಾಗೂ 90 ಎಂ.ಎಲ್ ನ 5 ವಿನ್ಸರ ಡಿಲಕ್ಸ ವಿಸ್ಕಿ ಟೇಟ್ರಾ ಪ್ಯಾಕೇಟ್ ಗಳು ಇದ್ದವು. ಅವುಗಳನ್ನು ಪಂಚರರಿಗೆ ತೋರಿಸಿ ಆ ರೀತಿ ಮದ್ಯವನ್ನು ಅಕ್ರಮವಾಗಿ ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು ಹಾಗೂ ಮಾರಾಟ ಮಾಡುವುದು ಅಪರಾಧ ಎಂದು ತಿಳಿಸಿ ದೊರೆತ ಎಲ್ಲ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಬಿಳಿ ಬಟ್ಟೆಯಿಂದ ಕೈ ಚೀಲವನ್ನು ತಯಾರಿಸಿ ಅದರಲ್ಲಿ ದೊರೆದ ಎಲ್ಲಾ ಮದ್ಯವನ್ನು ಹಾಕಿ ದಾರದಿಂದ ಬಾಯಿಯನ್ನು ಕಟ್ಟಿ ಅರಗು ಲೇಪಿಸಿ ಇಲಾಖಾ ಸೀಲ್ ಮಾಡಲಾಯಿತು. ನಂತರ ಮಾದರಿ ಸೀಲಿನ ಚೀಟಿ ತಯಾರಿಸಿ ಪ್ರಕರಣದ ವಿವರನ್ನು ಬರೆದು ಪಂಚರರ ಸಹಿ ಪಡೆದು ಚೀಲಕ್ಕೆ ಅಂಟಿಸಲಾಯಿತು. ಮಾದರಿ ಸೀಲಿನ ನಕಲನ್ನು ತಯಾರಿಸಿ ಪ್ರಕರಣದ ವಿವರ ಬರೆದು ಪಂಚರ ಸಹಿಯನ್ನು ಪಡೆಯಲಾಯಿತು. ನಂತರ ದೊರೆತ ಮದ್ಯವನ್ನು ನಮ್ಮ ವಶಕ್ಕೆ ಪಡೆದು ಸ್ಥಳದಲ್ಲಿಯೇ ಅಮಾನತ್ತು ಮಹಜರ್ ಬರೆದು ಬೆಳಿಗ್ಗೆ 07 ರಿಂದ 8 ಗಂಟೆವರೆಗೆ ತಯಾರಿಸಲಾಯಿತು.

2. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಚಾಸಾ 6 ರವರು ನೀಡಿರುವ ಉಕ್ತಲೇಖನದ ಮೇರೆಗೆ ನಿಪಿ 1 ನ್ನು ನಾನು ನನ್ನ ಸ್ವ ಬರವಣಿಗೆಯಿಂದ ಬರೆದಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬಿಳಿ ಚೀಲವನ್ನು ಸಾಕ್ಷಿ ನೋಡಿ ಗುರುತಿಸಿದ್ದು 35 ಓರಿಜಿನಲ್ ಚಾಯ್ಸು ವಿಸ್ಕಿಯ ಟೇಟ್ರಾ ಪ್ಯಾಕೇಟ್ ಗಳನ್ನು ಅವುಗಳನ್ನು ಒಟ್ಟಾಗಿ ಮು.ಮಾ 2 ಎಂದು ಗುರುತಿಸಲಾಯಿತು. 5 ವಿನ್ಸರ ಡಿಲಕ್ಸ ವಿಸ್ಕಿಯ ಟೇಟ್ರಾ ಪ್ಯಾಕೇಟ್ ಗಳನ್ನು ಅವುಗಳನ್ನು ಒಟ್ಟಾಗಿ ಮು.ಮಾ 3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಶ್ರೀ. ಕೆ ಎಸ್ ಡಿ ಆರೋಪಿ ಪರ ವಕೀಲರಿಂದಃ**

ಆ ದಿನ ನಾನು ಮುಂಜಾನೆಯ ಕರ್ತವ್ಯವನ್ನು ನಿರ್ವಹಿಸುತ್ತಿದ್ದೆ. ಈ ಬಗ್ಗೆ ದಾಖಲೆ ಒದಗಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ತನಿಖಾಧಿಕಾರಿ ಹಾಜರುಪಡಿಸಬೇಕು ಎಂದು ನುಡಿಯುತ್ತಾರೆ. ಆ ದಿನ ಚಾಸಾ 6 ರವರ ದೂರವಾಣಿ ಕರೆ ಮೇರೆಗೆ ನಾನು ಮುಂಜಾನೆ 6.30 ಕ್ಕೆ ಕರ್ತವ್ಯಕ್ಕೆ ಹಾಜರಾದೆ. ಈ ಬಗ್ಗೆ ನಿಪಿ 1 ರಲ್ಲಿ ನಮೂದಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ನಾನು ಠಾಣೆಯಲ್ಲಿದ್ದೆ ಅಲ್ಲಿಂದ ಸ್ಥಳಕ್ಕೆ ಬಂದೆ ಎಂದು ನಮೂದು ಇದೆ ಎಂದರೆ ಸರಿ. ನಮ್ಮ ಠಾಣೆಯಿಂದ ಸ್ಥಳಕ್ಕೆ ಹಾಸನ ಮತ್ತು ಮೈಸೂರು ರಸ್ತೆ ಮಾರ್ಗವಾಗಿ ಬಂದೆವು. ಸದರಿ ಮಾರ್ಗವಾಗಿ ಬಂದಲ್ಲಿ ವಾಹನವನ್ನು ರಸ್ತೆಯ ಎಡಭಾಗಕ್ಕೆ ಎಮ್.ಡಿ.ಸಿ.ಸಿ ಬ್ಯಾಂಕ್ ಎದುರು ನಿಲ್ಲಿಸಬೇಕು ಎಂದರೆ ನಾವು ತಿರುವು ತೆಗೆದುಕೊಂಡು ಗರಡುಗಂಭ ಸರ್ಕಲ್ ನ ಬಲಭಾಗದ ಕಡೆ ನಿಲ್ಲಿಸಿದೆವು ಎಂದು ಸಾಕ್ಷಿ ನುಡಿಯುತ್ತಾರೆ. ಹೆಚ್.ಕೆ.ಜಿ.ಎನ್ ಹೋಟೆಲ್ ಮತ್ತು ಬುಕ್ ಸ್ಟೋರ್ ಬಳಿ ವಾಹನವನ್ನು ನಿಲ್ಲಿಸಿದೆವು. ಇದರ ಪಕ್ಕದಲ್ಲಿಯೇ ಸಿದ್ದೇಶ್ವರ ಸ್ಟೋರ್ ಮತ್ತು ಬಾವಸಾರ ಆಟೋ ಪಾರ್ಟ್ಸ ಎಂದರೆ 2 ಹೋಟೇಲ್ ಗಳು ಮತ್ತು ಅಂಗಡಿ ನಂತರ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾವು ನಿಲ್ಲಿಸಿದ ವಾಹನಕ್ಕೂ ಮತ್ತು ನಿಪಿ 1 ರ ಸ್ಥಳಕ್ಕೂ ಸುಮಾರು 50 ಮೀ ಅಂತರವಿದೆ ಎಂದರೆ ಸರಿ.

2. ಮೊದಲು ನೋಟಿಸ ನೀಡಿ 50 ಮೀ ಅಂತರವಿರುವ ಸ್ಥಳಕ್ಕೆ ನಮ್ಮ ಇಲಾಖಾ ಜೀಪಿನಲ್ಲಿ ಸರ್ಕಲ್ ಬಳಸಿ ಪಂಚರ ಜೊತೆ ಸ್ಥಳಕ್ಕೆ ಬಂದೆವು. ಸಿದ್ದೇಶ್ವರ ಸ್ಟೋರ್ ಮತ್ತು ಬಾವಸಾರ ಆಟೋ ಪಾರ್ಟ್ಸ ಅದರ ಎದುರುಗಡೆ ಮಲ್ಲಿಕಾರ್ಜುನ ಬಾರ್ ಇದೆ ಎಂದರೆ ಸರಿ. ಸದರಿ ಜಾಗದಲ್ಲಿ ಟೀ ಹೊಟೇಲ್‌ಗಳು ಇರುವ ಕಾರಣ ಬೆಳಗಿನ ಜಾವ ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ. ಸದರಿ ಜಾಗದಿಂದ ನಿಪಿ 1 ರ ಜಾಗಕ್ಕೆ ಕಾಣುತ್ತದೆ ಎಂದರೆ ನಾವು ಕಾಣಿಸದೆ ಇರುವ ರೀತಿಯಲ್ಲಿ ನಾವು ನಿಂತಿದ್ದೇವು ಎಂದು ನುಡಿಯುತ್ತಾರೆ. ಗಲ್ಲಿಯ ಮುಂಭಾಗದಲ್ಲಿ ಪಲಾವ್ ಸೆಂಟರ್ ಇದೆ ಎಂದರೆ ಸರಿ. ಸದರಿ ಗಲ್ಲಿಯಲ್ಲಿ ಬಹಳಷ್ಟು ವ್ಯಾಪಾರ ನಡೆಯುತ್ತದೆ ಎಂದರೆ ಸರಿ. ಆ ದಿನ ಅಲ್ಲಿ ಇದ್ದಂತ ಸ್ಥಳೀಯರ ಮಹಜರ್ ಗೆ ಕರೆಯಲಿಲ್ಲ ಎಂದರೆ ಸರಿ. ಸದರಿ ಜಾಗವು ಜನ ಸಂದಣಿ ಇರುವ ಪ್ರದೇಶವಾಗಿರುವುದರಿಂದ ದಾಳಿ ಮಾಡಿದರು ಓಡಿ ಹೋಗಲು ಸಾಧ್ಯವಿರುವುದಿಲ್ಲ ಎಂದರೆ ಬೆಳಿಗ್ಗೆ 7 ಗಂಟೆ ಆಗಿರುವ ಕಾರಣ ಓಡಿ ಹೋಗಲು ಸಾಧ್ಯವಿದೆ ಎಂದು ಸಾಕ್ಷಿಯು ನುಡಿಯುತ್ತಾರೆ.

3. ಆರೋಪಿ ಆ ದಿನ ಸ್ಥಳದಲ್ಲಿ ಇರಲಿಲ್ಲ ಯಾವುದೇ ಮದ್ಯ ಮಾರಾಟ ಮಾಡುತ್ತಿರಲಿಲ್ಲ, ಆ ದಿನ ನಾನು ನಿಪಿ 1 ನ್ನು ಸ್ಥಳದಲ್ಲಿ ಬರೆದಿಲ್ಲ, ನನ್ನ ಸಮಕ್ಷಮ ಮು.ಮಾ 1 ರಿಂದ 3 ನ್ನು ಅಮಾನತ್ತು ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ 1 ರಲ್ಲೇ ಮದ್ಯ ತುಂಬಿತ್ತು ಎಂದು ಹೇಳಲು ಅದರ ಮೇಲೆ ಯಾವುದೇ ವಿಶೇಷವಾದ ಗುರುತು ಇಲ್ಲ ಎಂದರೆ ಸರಿ. ಈ ರೀತಿಯ ಚೀಲ ಎಲ್ಲ ಗೊಬ್ಬರದ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ. ಮು.ಮಾ 2 ಮತ್ತು 3 ನ್ನು ಯಾವುದೋ ಮದ್ಯದ ಅಂಗಡಿಯಿಂದ ತಂದು ಆರೋಪಿಯ ವಿರುದ್ಧ ಪ್ರಕರಣ ಬಲಪಡಿಸಲಾಗಿದೆ ಎಂದರೆ ಸರಿಯಲ್ಲ.

4. ನಿಪಿ 1 ರಲ್ಲಿ ನನ್ನ ಬರವಣಿಗೆಯಿಂದ ಬರೆದಿದ್ದೇನೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ಆ ದಿನ ಆರೋಪಿಯು ಸ್ಥಳದಲ್ಲಿ ಯಾವುದೇ ಮದ್ಯ ಮಾರಾಟ ಮಾಡುತ್ತಿರಲಿಲ್ಲ, ಈ ಹಿಂದೆ ನಾನು ಆರೋಪಿಯನ್ನು ನೋಡಿಯೇ ಇಲ್ಲ ಆದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದೇಶ್ವರ ಸ್ಟೋರ್ ಮತ್ತು ಬಾವಸಾರ ಆಟೋ ಪಾರ್ಟ್ಸ್ ಎದುರುಗಡೆ ಮಲ್ಲಿಕಾರ್ಜುನ್ ಬಾರ್ ಇರುವ ಕಾರಣ ಸದರಿ ಸ್ಥಳದಲ್ಲಿ ಆರೋಪಿ ಮದ್ಯ ಮಾರಾಟ ಮಾಡುವ ಪ್ರಮೇಯವೇ ಇಲ್ಲ ಎಂದರೆ ಆತ ಮದ್ಯ ಮಾರಾಟ ಮಾಡುತ್ತಿದ್ದುದು ಬಾರ್ ನ ಎದುರು ರಸ್ತೆಯಲ್ಲಿ ಹಾಗೂ 7 ಗಂಟೆ ಸಮಯದಲ್ಲಿ ಬಾರ್ ತೆರೆದಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

ಮರು ವಿಚಾರಣೆ – ಇರುವುದಿಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ